# ಶಿಕ್ಷಕ–ಶಿಕ್ಷಣ

ಡಾ. ಡಿ.ಕೆ.ರಾಜೇಂದ್ರ

ಹಲವು ಪರಿವರ್ತನೆಗಳಿಗೆ ಒಳಗಾಗುತ್ತಿರುವವ ಇಂದಿನ ದಿನಗಳಲ್ಲಿ ನಮ್ಮ ಶಿಕ್ಷಣ, ಶಿಕ್ಷಕ ಹಾಗೂ ಶಿಕ್ಷಾರ್ಥಿಗಳ ಕರ್ತವ್ಯ, ಅವರ ಜವಾಬ್ದಾರಿ, ಸಮಾಜದಲ್ಲಿ ಅವರ ಮಹತ್ವ ಈ ಅಂಶಗಳನ್ನು ಕುರಿತಂತೆ ಹೊಸದಾಗಿ ಚಿಂತನೆ ನಡೆಸುವ, ಹೊಸ ರೀತಿಯಲ್ಲಿ ಆರೋಗ್ಯಕರ ಶಿಕ್ಷಣ ಕ್ರಮವನ್ನು ರೂಪಿಸಿಕೊಳ್ಳುವ ಅಗತ್ಯವಿದೆ. ಈ ವಿಷಯವಾಗಿ ಬರೆದಿರುವ ಲೇಖಕರು ಸ್ವತಃ ತಾವೇ ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಕಾಲ ಸೇವೆ ಸಲ್ಲಿಸಿ ಅನುಭವ ಹೊಂದಿದವರು. ಅವರು ಕನ್ನಡದ ಹಿರಿಯ ವಿದ್ವಾಂಸರು ಹಾಗೂ ಲೇಖಕರು; ಪ್ರಸ್ತುತ ಮೈಸೂರು ನಿವಾಸಿಗಳು.



ಶಿಕ್ಷಕ–ಶಿಕ್ಷಣ ಇವೆರಡರ ಸಂಬಂಧ ಅವಿನಾಭಾವವಾದದ್ದು. ಪರಸ್ಪರ ಪೂರಕ–ಪೋಷಕ; ಒಂದರ ಹೊರತು ಮತ್ತೊಂದನ್ನು ಕಲ್ಪಿಸಿಕೊಳ್ಳಲು ಸಾಧ್ಯವಾಗದ್ದು. ಕಾರಣ, ಶಿಕ್ಷಣದ ಯಶಸ್ಸು ಹಾಗೂ ಗುರಿ ಈಡೇರಲು ಸಾಧ್ಯವಾಗುವುದು ಶಿಕ್ಷಕನಿಂದಲೇ. ಶಿಕ್ಷಣ ನಿಜವಾದ ಅರ್ಥದಲ್ಲಿ ಪೂರ್ಣಗೊಳ್ಳಬೇಕಾದರೆ, ಶಿಕ್ಷಕ ಎಲ್ಲ ರೀತಿಯಿಂದಲೂ ಸಮರ್ಥನಾಗಿರಬೇಕಾಗುತ್ತದೆ. ಶಿಕ್ಷಕ ವಿದ್ಯೆಯನ್ನು ನೀಡುವ ಗುರುವಾದರೆ, ಶಿಕ್ಷಣ ಪಡೆಯುವವನು ಶಿಷ್ಯನೆನಿಸುತ್ತಾನೆ. ಗುರು–ಶಿಷ್ಯರಲ್ಲಿ ಇರಬೇಕಾದ ಲಕ್ಷಣವನ್ನು ಸ್ವಾಮಿ ವಿವೇಕಾನಂದರು ಬಣ್ಣಿಸುವುದು ಹೀಗೆ:

''ಬೋಧನೆಯೆಲ್ಲ ದಾನದ ಮತ್ತು ಸ್ವೀಕಾರದ ಮೇಲೆ ನಿಂತಿದೆ. ಗುರು ವಿದ್ಯೆಯನ್ನು ದಾನ ಮಾಡುವನು. ಶಿಷ್ಯ ಅದನ್ನು ಸ್ವೀಕರಿಸುವನು. ಆದರೆ ಒಬ್ಬನಿಗೆ ಕೊಡುವುದಕ್ಕೆ ಏನಾದರೂ ಇರಬೇಕು; ಮತ್ತೊಬ್ಬ ಸ್ವೀಕರಿಸುವುದಕ್ಕೆ ಯೋಗ್ಯನಾಗಿರಬೇಕು.''

ವಿವೇಕಾನಂದರ ದೃಷ್ಟಿಯಲ್ಲಿ ಗುರು–ಶಿಷ್ಯ ಇಬ್ಬರೂ ಮುಖ್ಯವೇ. ಹಾಗೆಂದು ಗುರುವಿನ ಹೆಚ್ಚುಗಾರಿಕೆಯನ್ನು ಕಡೆಗಣಿಸುವಂತಿಲ್ಲ. ಒಂದು ಶಿಲೆಯಲ್ಲಿ ಹುದುಗಿರುವ ಕಲೆಯನ್ನು ಬಿಡಿಸಿ ಹೊರತೆಗೆಯುವ ಶಿಲ್ಪಿಯಂತೆ ಒಬ್ಬ ಶಿಕ್ಷಕ ತನ್ನ ಸಾಮರ್ಥ್ಯದಿಂದ ಶಿಷ್ಯನಲ್ಲಿ ಹುದುಗಿರುವ ವಿದ್ಯೆಯನ್ನು ಹೊರತೆಗೆಯುವ ಕುಶಲತೆಯನ್ನು ಹೊಂದಿರಬೇಕಾಗುತ್ತದೆ.

ಆಧುನಿಕ ಶಿಕ್ಷಣ ಇಂದು ಸಮಸ್ಯೆಗಳ ಸುಳಿಯಲ್ಲಿ ಸಿಲುಕಿದೆ. ಹಲವು ತೆರನಾದ ಸಮಸ್ಯೆಗಳನ್ನು ಅದು ಎದುರಿಸುತ್ತಿದೆ. ಅದರ ಮೂಲವನ್ನೇ ಕೆಣಕುವ ಮೂಲಭೂತ ಪ್ರಶ್ನೆಗಳು ನಮ್ಮೆದುರು ಬೃಹದಾಕಾರವಾಗಿ ತಲೆ ಎತ್ತಿ ನಿಲ್ಲುತ್ತಿವೆಯಾದರೂ, ಅವಕ್ಕೆ ಸರಿಯಾದ ಉತ್ತರವನ್ನು ನೀಡಲು ಇನ್ನೂ ಸಾಧ್ಯವಾಗುತ್ತಿಲ್ಲ.

ವಿದ್ಯೆ ಕಲಿಯುವುದು ಒಂದು ಕಾಲಕ್ಕೆ ಜ್ಞಾನಾರ್ಜನೆಯ ಹಾಗೂ ಜ್ಞಾನದಾಹವನ್ನು ಇಂಗಿಸುವ ಮೂಲ ಉದ್ದೇಶವನ್ನು ಹೊಂದಿತ್ತು. ನಮ್ಮ ಸಮಾಜದಲ್ಲಿ ಅದು ಎರಡು ಸ್ತರಗಳಲ್ಲಿ ಬೆಳೆದು ಬಂದದ್ದನ್ನು ಕಾಣಬಹುದು. ಒಂದು ಜನಪದ ಸ್ತರದಲ್ಲಿ ಮತ್ತೊಂದು ಶಿಷ್ಟ ಸ್ತರದಲ್ಲಿ. ಜನಪದ ಸ್ತರದ ವಿದ್ಯೆ ಬದುಕಿನ ಮೂಲಕ ಬಂದುದಾಗಿ, ಬದುಕಿಗೆ ಬೇಕಾದುದ್ದನ್ನು ದೊರಕಿಸಿ ಕೊಡುವುದಾಗಿತ್ತು . ಇಡೀ ಬದುಕು ಹಾಗೂ ಅದನ್ನು ಒಳಗೊಂಡ ಇಡೀ ಸಮಾಜವೇ ಅದರ ಕಾರ್ಯಕ್ಷೇತ್ರವಾಗಿತ್ತು ಹಾಗೂ ಬಹುಸಂಖ್ಯಾತರ ಕಲಿಕೆಯ ಕೇಂದ್ರವಾಗಿತ್ತು:

**ಹಲಗೆಯ ಹಿಡಿದಿಲ್ಲ ಬಳಪಾದಿ ಬರೆದಿಲ್ಲ**
**ಶ್ರೀಗುರು ನಮಗೆ ಕಲಿಸಿಲ್ಲ । ತಾಯಿಗಳಿರ**
**ಲೆಖ್ಖಣಿಕೆ ನಮಗೆ ತಿಳಿದಿಲ್ಲ ॥**

ಎಂದು ಹೇಳುತ್ತಲೇ ಬದುಕಿಗೆ ಬೇಕಾದುದೆಲ್ಲವನ್ನೂ ಅನುಭವದ ಮೂಲಕವೇ ತಮ್ಮದಾಗಿಸಿಕೊಳ್ಳುವ ಒಂದು ಶಿಕ್ಷಣ ವ್ಯವಸ್ಥೆ ಅಂದಿನದಾಗಿತ್ತು. 'ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರು' ಎಂಬುದಕ್ಕೆ ಸಾಕ್ಷಿಯಾಗಿತ್ತು. ಎಲ್ಲವನ್ನೂ ನೋಡನೋಡುತ್ತಲೇ, ಕೇಳಕೇಳುತ್ತಲೇ, ಮಾಡಮಾಡುತ್ತಲೇ ಕರಗತಮಾಡಿಕೊಳ್ಳುವ, ಪರಿಣತಗೊಳಿಸುವ ಶಕ್ತಿ ಆ ಮೂಲಕ ಅವರಿಗೆ ದೊರೆಯುತ್ತಿತ್ತು. ಜೀವನಾವಶ್ಯಕವೆನಿಸಿದ, ವೃತ್ತಿಪರವಾದ ಶಿಕ್ಷಣದ ಜೊತೆಗೆ, ಜೀವನಮೌಲ್ಯವನ್ನು ತುಂಬುವ, ಆದರ್ಶವನ್ನು ಮೈಗೂಡಿಸಿಕೊಳ್ಳುವ ಅಂಶಗಳೂ ಅದರಲ್ಲಿಯೇ ಬೆರೆತಿರುತ್ತಿದ್ದವು. ಹಾಗಾಗಿ ಬದುಕು, ವೃತ್ತಿ, ಶಿಕ್ಷಣ ಇವು ಬೇರೆ ಬೇರೆಯಾಗಿರಲಿಲ್ಲ. ಬದುಕಿನೊಂದಿಗೇ ಎಲ್ಲವೂ ಅಂತರ್ಗತವಾಗಿದ್ದವು.

**ಆಚಾರಕ್ಕರಸಾಗು ನೀತಿಗೆ ಪ್ರಭುವಾಗು**
**ಮಾತಿನಲಿ ಚೂಡಾಮಣಿಯಾಗು । ನನಕಂದ**
**ಜ್ಯೋತಿಯೇ ಆಗು ಜಗಕೆಲ್ಲ ॥**

ಜೀವನಾದರ್ಶಗಳನ್ನು ಬದುಕಿನ ಮೌಲ್ಯವನ್ನೂ ಉತ್ತುಬಿತ್ತಿ, ಕಳೆಕಿತ್ತು, ಬೆಳೆ ತೆಗೆಯುವಾಗಲೇ ಬೋಧಿಸಿಬಿಡುತ್ತಿದ್ದರು. ''ಅತ್ತೆಯ ಮನೆಯಲ್ಲಿ ಮುತ್ತಾಗಿ ಇರಬೇಕು. ಹೊತ್ತಾಗಿ ನೀಡಿದರೂ ಉಣಬೇಕು'' ಎಂಬಂತಹ ನೀತಿ ಪಾಠವನ್ನು ಹೇಳಿ ಹೆಣ್ಣುಮಕ್ಕಳನ್ನು ಸುಸಂಸ್ಕೃತರನ್ನಾಗಿಸುತ್ತಿದ್ದರು. ಇಲ್ಲಿ ತಾಯಿಯೇ ದೊಡ್ಡ ಗುರು, ಮನೆಯೇ ಗುರುಕುಲವಾಗಿತ್ತು.

ಈ ಗ್ರಾಮೀಣ ವಿದ್ಯೆಯ ಕಲಿಕೆಯ ವಿಧಾನ ಸುಲಭವಾಗಿತ್ತು, ಸರಳವಾಗಿತ್ತು. ಹಾಗೆ ನೋಡಿದರೆ ಸಮಗ್ರ ಜನಪದ ಸಾಹಿತ್ಯವೇ ಜನಪದ ಸಮಾಜದ ಪಠ್ಯವಾಗಿ ಗೋಚರಿಸುತ್ತದೆ. ಅದೆಲ್ಲವೂ ಗ್ರಾಮೀಣ ಗೃಹಿಣಿಯರು ಸೃಷ್ಟಿಸಿದ ಸಾಹಿತ್ಯ, ಕಲಿಸಿದ ವಿದ್ಯೆ. ಆ ಮೂಲಕವೇ ಅವರು ಭದ್ರವಾದ ಸಮಾಜವನ್ನು ಹಾಗೂ ಸುಭದ್ರವಾದ ಸಂಸ್ಕೃತಿಯನ್ನು ನಿರ್ಮಿಸಲು ಸಾಧ್ಯವಾಯಿತು. ನಿರುದ್ಯೋಗಿಗಳಿಲ್ಲದ ಕರ್ಮಯೋಗಿಗಳ ಸಮಾಜವನ್ನು ಕಟ್ಟಲು ಕಾರಣವಾಯಿತು. ಅದೆಲ್ಲವೂ ಅನಕ್ಷರಸ್ಥ ಸಮಾಜದ ಕೊಡುಗೆ. ಅವರು ಅನಕ್ಷರಸ್ಥರಾಗಿದ್ದರೇ ಹೊರತು ಅಜ್ಞಾನಿಗಳಾಗಿರಲಿಲ್ಲ.

ಮತ್ತೊಂದು ಕಡೆ ಶಿಷ್ಟ ರೂಪದಲ್ಲಿ ಋಷಿಮುನಿಗಳ ಮೂಲಕ ಗುರುಕುಲಗಳಲ್ಲಿ ಆರಂಭಗೊಂಡ ಶಿಷ್ಟ ಸ್ತರದ ವಿದ್ಯಾಭ್ಯಾಸ. ಅದು ಬದುಕಿಗೆ ಬೇಕಾದುದನ್ನು, ಬದುಕಿನ ನಂತರವೂ ಗಳಿಸಲು ಬೇಕಾದುದನ್ನು ಕಲಿಸುವ ವಿದ್ಯಾಕೇಂದ್ರ. ಆದರೆ ಅವು ಅಲ್ಪಸಂಖ್ಯಾತರ ಶಿಕ್ಷಣ ಕೇಂದ್ರಗಳಾಗಿಯೇ, ಸೀಮಿತ ಉದ್ದೇಶವನ್ನೂ ಸೀಮಿತ ಮಾರ್ಗವನ್ನೂ ಒಳಗೊಂಡದ್ದಾಗಿತ್ತು. ಅಲ್ಲಿ ಗುರು-ಶಿಷ್ಯರ ಸಂಬಂಧ ನಿಕಟವಾಗಿದ್ದು ಶಿಸ್ತುಬದ್ಧವಾಗಿತ್ತು. ಕಲಿಸುವ ಗುರುವಿನಂತೆಯೇ ಕಲಿಯಲು ಬಂದ ಶಿಷ್ಯನೂ ಬದ್ಧತೆಯಿಂದ, ಸಮರ್ಪಣಭಾವದಿಂದ ಇರಬೇಕಾಗಿತ್ತು.

ಇಂದು ಆಧುನಿಕ ಶಿಕ್ಷಣ ಕ್ರಮ ಇವೆರಡರಿಂದಲೂ ತೀರ ಭಿನ್ನವಾದುದಾಗಿದೆ. ಮೇಲಿನ ಎರಡೂ ಶಿಕ್ಷಣ ಕ್ರಮದ ಯಾವ ಉದ್ದೇಶಗಳನ್ನೂ ಒಳಗೊಳ್ಳದೆ, ಕೇವಲ ಪದವೀಧರರನ್ನು ಸೃಷ್ಟಿಸುವ ವಿದ್ಯಾಕೇಂದ್ರಗಳಾಗಿ ರಾರಾಜಿಸುತ್ತವೆ. ಇದು ನಿಜಕ್ಕೂ ತೀರ ಅಪಾಯಕಾರಿಯಾದ ಹೆಜ್ಜೆ. ಇದರ ದುಷ್ಪರಿಣಾಮಗಳು ಈಗಾಗಲೇ ಸಮಾಜದಲ್ಲಿ ಗೋಚರಿಸುತ್ತಿವೆ.

ವಿದ್ಯೆ ವ್ಯಕ್ತಿಯ ವ್ಯಕ್ತಿತ್ವದ ಸರ್ವತೋಮುಖವಾದ ಬೆಳವಣಿಗೆಗೆ ಪೂರಕವಾಗುವಂತಿರಬೇಕು. ಅವನ ಬೌದ್ಧಿಕ ಶಕ್ತಿಯನ್ನು ಹೆಚ್ಚಿಸುವುದರ ಜೊತೆಗೆ, ಅವನ ಮಾನಸಿಕ ಶಕ್ತಿಯನ್ನು ಬಲಗೊಳಿಸಿ — ನಯ, ವಿನಯ, ಸೌಜನ್ಯ, ಸನ್ನಡತೆ ಇತ್ಯಾದಿ ಮಾನವೀಯ ಗುಣಗಳು ಅವನಲ್ಲಿ ಅವತರಿಸುವಂತೆ ಶಿಕ್ಷಣ ಪದ್ಧತಿ ರೂಪುಗೊಳ್ಳಬೇಕು, ಈ ದೃಷ್ಟಿಯಿಂದ ಪರಿಶೀಲಿಸುವುದಾದರೆ, ಮೇಲಿನ ಮೂರೂ ಕ್ರಮಗಳಲ್ಲಿ ಜನಪದ ಸ್ತರದ ಕಂಠಸ್ಥವಾದ ಶಿಕ್ಷಣ ಪದ್ಧತಿಯೇ ಒಂದರ್ಥದಲ್ಲಿ ಉತ್ತಮವಾದದ್ದು



ಅನಿಸುತ್ತದೆ. ಏಕೆಂದರೆ ಇಲ್ಲಿಯದು ಬರಿಯ ಅಕ್ಷರ ಕಲಿಕೆಯಲ್ಲ ಅಥವಾ ಪದವಿಪತ್ರ ನೀಡುವುದಲ್ಲ. ಬದಲಾಗಿ ಬದುಕಿಗೆ ಅವಶ್ಯವೆನಿಸಿದ ಎಲ್ಲವನ್ನೂ ಪೂರ್ಣಗೊಳಿಸುವುದು. ಸ್ವಾಮಿ ವಿವೇಕಾನಂದರು ಹೇಳಿದ: ''ಚಾರಿತ್ರ್ಯ ರೂಪಿಸುವ, ಮನಸ್ಸಿನ ಶಕ್ತಿಯನ್ನು ಹೆಚ್ಚಿಸುವ, ಬುದ್ಧಿಯನ್ನು ವಿಕಾಸಗೊಳಿಸುವ ಶಿಕ್ಷಣ ನಮಗಿಂದು ಬೇಕು. ಇದರಿಂದ ವ್ಯಕ್ತಿ ಸ್ವಾವಲಂಬಿಯಾಗುತ್ತಾನೆ. ತನ್ನ ಕಾಲಮೇಲೆ ತಾನು ನಿಲ್ಲುತ್ತಾನೆ'' ಎಂಬ ಮಾತು ಅಲ್ಲಿ ಪೂರ್ಣಗೊಂಡಂತೆ ಕಾಣುತ್ತದೆ.

ಯಾವುದೇ ಶಿಕ್ಷಣ ಪದ್ಧತಿಯಲ್ಲಾಗಲಿ ಅಲ್ಲಿ ಗುರುವಿನ ಪಾತ್ರ ಮುಖ್ಯವಾಗುತ್ತದೆ. ಜನಪದ ಸ್ತರದ ವಿದ್ಯಾಕ್ರಮದಲ್ಲಿಯೂ ಶಿಷ್ಯಸ್ಥಾನದಲ್ಲಿ ನಿಂತವನು ತಪ್ಪು ಮಾಡಿದರೆ ಬೈಗುಳದ ಬಹುಭಾಗ ಅವನಿಗೆ ಶಿಕ್ಷಣ ಕೊಟ್ಟ ತಂದೆ ಅಥವಾ ತಾಯಿಗೆ ಹೋಗುತ್ತದೆ — ''ಯಾರು ನಿನಗೆ ಬುದ್ಧಿ ಕಲಿಸಿದ್ದು?'' ಎಂಬುದಾಗಲಿ ''ತಾಯಿಯಂತೆ ಮಗಳು, ನೂಲಿನಂತೆ ಸೀರೆ'' ಎಂಬ ಮಾತಾಗಲೀ ಅಥವಾ ''ನಿನಗೆ ಹೇಳಿಕೊಟ್ಟವರಿಗೆ ಬುದ್ಧಿಯಿಲ್ಲ'' ಎಂಬಂತಹ ಮಾತುಗಳಾಗಲಿ ಕಲಿಸಿದ ಗುರುವಿಗೆ ತಲುಪುವಂತಹದು.

ಶಿಕ್ಷಣ ರಂಗದಲ್ಲಿ ಶಿಕ್ಷಕನ ಪಾತ್ರ ಅತಿ ಮುಖ್ಯವಾದುದು. ಅವನು ನಿಜವಾದ ಶಿಲ್ಪಿ, ಆದರ್ಶವ್ಯಕ್ತಿ, ಮಾರ್ಗದರ್ಶಕ, ಸ್ಫೂರ್ತಿಯ ಚಿಲುಮೆ, ಎಲ್ಲವೂ. ನಿಜವಾದ, ಸಮರ್ಥನಾದ ಶಿಕ್ಷಕ ಹೇಗಿರಬೇಕೆಂಬುದನ್ನು ಕುರಿತು ಸ್ವಾಮಿ ವಿವೇಕಾನಂದರು ಹೇಳುವುದು ಹೀಗೆ: ''ಕ್ಷಣದಲ್ಲಿ ಸಹಸ್ರಾರು ಮಂದಿಯಂತೆ ಯಾವನು ಆಗಬಲ್ಲನೊ ಆತನೇ ನಿಜವಾದ ಗುರು. ತಕ್ಷಣವೇ ಶಿಷ್ಯನ ಮಟ್ಟಕ್ಕೆ ಇಳಿದುಬಂದು, ತನ್ನ ಶಕ್ತಿಯನ್ನು ಅವನಿಗೆ ಕೊಟ್ಟು, ಅವನ ಕಣ್ಣಿನ ಮೂಲಕ ನೋಡಬಲ್ಲ ಕಿವಿಯ ಮೂಲಕ ಕೇಳಬಲ್ಲ, ಅವನ ಮನಸ್ಸಿನ ಮೂಲಕ ಅರಿಯಬಲ್ಲವನೇ ನಿಜವಾದ ಗುರು. ಅಂತಹ ಗುರುವೇ ನಿಜವಾಗಿ ಉಪದೇಶ ಮಾಡಬಲ್ಲ, ಇತರರಲ್ಲ. ಜಗತ್ತಿನಲ್ಲಿ ನಿಷೇಧಾತ್ಮಕವಾದ ಮಾರ್ಗವನ್ನು ಅನುಸರಿಸುವ ಯಾರೂ ಜಗತ್ತಿನ ಹಿತವನ್ನು ಮಾಡಲಾರರು.''

ಶಿಕ್ಷಕನಾದವನು ಶಿಷ್ಯನ ವಿಷಯದಲ್ಲಿ ಸಹಸ್ರ ಕಣ್ಣುಳ್ಳವನಾಗಿರಬೇಕಾಗುತ್ತದೆ. ಪುಸ್ತಕದಲ್ಲಿರುವುದನ್ನು ಶಿಷ್ಯನ ಮಸ್ತಕಕ್ಕೆ ತುಂಬುವುದಷ್ಟೇ ಅವನ ಕೆಲಸವಾಗಬಾರದು. ಶಿಷ್ಯನ ಸರ್ವತೋಮುಖ ಬೆಳವಣಿಗೆಯತ್ತ ಅವನ ಗಮನವಿರಬೇಕಾಗುತ್ತದೆ. ಅವನ ವ್ಯಕ್ತಿತ್ವದ ಅರಳುವಿಕೆಗೆ ಶಿಕ್ಷಕ ಪ್ರೇರಣೆ ಹಾಗೂ ಸ್ಫೂರ್ತಿಯಾಗಬೇಕು. ''ನನ್ನ ಶಿಕ್ಷಣದ ರೀತಿಯು ಗುರುಕುಲವಾಸ, ಗುರುವಿನ ಜ್ವಲಂತ ಉದಾಹರಣೆ ಇಲ್ಲದೆ ಶಿಕ್ಷಣವಿಲ್ಲ'', ಎಂಬ ವಿವೇಕಾನಂದರ ವಾಣಿ ಶಿಷ್ಯನ ಪೂರ್ಣವ್ಯಕ್ತಿತ್ವ ವಿಕಸನಕ್ಕೆ ಶಿಕ್ಷಕನ ಪ್ರತಿ ಕ್ಷಣ ಎಷ್ಟೊಂದು ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ ಎಂಬುದನ್ನು ಹೇಳು ತ್ತದೆ. ಶಿಕ್ಷಕನಾದವನು ಸೂಕ್ಷ್ಮಮತಿಯಾಗಿದ್ದಷ್ಟು, ಶಿಷ್ಯನ ಅಂತರಂಗವನ್ನು ಅರಿತು ಅವನ ಮನಃಸ್ಥಿತಿಗನುಗುಣವಾಗಿ ಅವನನ್ನು ತಿದ್ದಿ ತೀಡಲು ಸಾಧ್ಯ. ಬದಲಾಗಿ ಸ್ವಾಮಿ ವಿವೇಕಾನಂದರೇ ಹೇಳುವಂತೆ: ''ನಮ್ಮ ಉಪಾಧ್ಯಾಯರುಗಳು ನಮ್ಮ ಹುಡುಗರನ್ನು ಗಿಳಿಗಳನ್ನಾಗಿ ಮಾಡುತ್ತಿದ್ದಾರೆ. ಅನೇಕ ವಿಷಯಗಳನ್ನು ಕಂಠಪಾಠ ಮಾಡುವಂತೆ ಮಾಡಿ ಅವರ ಮಿದುಳನ್ನು ವಿನಾಶಗೊಳಿಸುತ್ತಿದ್ದಾರೆ.'' ಎಂಬ ಅಪವಾದಕ್ಕೆ ಗುರಿಯಾಗಬೇಕಾಗುತ್ತದೆ.

ಇಂದಿನ ಶಿಕ್ಷಣ ಹಾಗೂ ಶಿಕ್ಷಣ ಪದ್ಧತಿ ಎರಡೂ ಊಹೆಗೂ ಮೀರಿ ತನ್ನ ಬಾಹುಗಳನ್ನು ಚಾಚಿದೆ. ಹಲವು ಸವಾಲುಗಳನ್ನು ಅದು ಮುಂದಿಟ್ಟಿದೆ. ಒಂದು ರೀತಿಯಲ್ಲಿ ಅದೆಲ್ಲವೂ ಹೆಮ್ಮೆಪಟ್ಟುಕೊಳ್ಳಬಹುದಾದ ಸಂಗತಿಗಳೇ ನಿಜ. ಆದರೆ ಇದೆಲ್ಲವೂ ಕೆಲವರ ಸ್ವತ್ತಾಗಿರುವಂತೆ ತೋರುತ್ತದೆ. ಸಮಾನ ಶಿಕ್ಷಣ ಎಲ್ಲರಿಗೂ ದೊರಕುತ್ತಿಲ್ಲ. ಕಾನೂನಿನಲ್ಲಿ ಅದಕ್ಕೆ ಅವಕಾಶವಿದ್ದರೂ ಸಾಮಾಜಿಕವಾಗಿ ಆರ್ಥಿಕವಾಗಿ ಅದನ್ನು ಪಡೆದುಕೊಳ್ಳುವ ಸಾಮರ್ಥ್ಯ ಎಲ್ಲರಿಗೂ ಸಾಧ್ಯವಾಗುತ್ತಿಲ್ಲ. ಇದು ಪೈಪೋಟಿಯ ಯುಗ. ಎಲ್ಲ ರಂಗಗಳಲ್ಲಿಯೂ ಅದನ್ನು ಕಾಣುತ್ತಿದ್ದೇವೆ. ಹೆಚ್ಚಿನ ಅಂಕ ಗಳಿಸುವ ಕಡೆಗೇ ಎಲ್ಲರ ಗಮನ ಹಾಗೂ ಸ್ಥಾನ. ಇಲ್ಲಿ ಪಂದ್ಯ ಒಂದೇ, ಗುರಿಯೂ ಒಂದೇ, ಆದರೆ ಅವರುಗಳಿಗಿರುವ ಅವಕಾಶಗಳು ಬೇರೆಬೇರೆ. ಯಾವುದೋ ಹಳ್ಳಿಯ ಸಾಮಾನ್ಯ ಶಾಲೆಯಲ್ಲಿ ಓದಿದ ಸಾಮಾನ್ಯ ವಿದ್ಯಾರ್ಥಿ, ನಗರದ ಪ್ರತಿಷ್ಠಿತ ಶಾಲೆಯಲ್ಲಿ ಓದಿದ ವಿದ್ಯಾರ್ಥಿಯೊಂದಿಗೆ ಸೆಣೆಸಾಡುವುದು ಎಷ್ಟು ಸರಿ? ಎಷ್ಟೋ ಗ್ರಾಮೀಣ ಪ್ರದೇಶದ ಶಾಲೆಗಳಲ್ಲಿ ಸರಿಯಾದ ಕಟ್ಟಡವೂ ಇರುವುದಿಲ್ಲ, ಉಪಾಧ್ಯಾಯರೂ ಇರುವುದಿಲ್ಲ. ಈ ಅಸಮಾನತೆ ಬದಲಾಗದ ಹೊರತು ಸಮಾನ ಸ್ಪರ್ಧೆ ಹೇಗೆ ಸರಿಹೋದೀತು?

ವಿದ್ಯೆ ಕಲಿಯುವ ವಿದ್ಯಾರ್ಥಿಯು, ಶಿಕ್ಷಕ ಹಾಗೂ ಶಿಕ್ಷಣ ಪದ್ಧತಿಗಳೆರಡರ ಕೈಗೊಂಬೆಯಂತಾಗಿದ್ದಾನೆ. ನಿಜವಾದ ವಿದ್ಯೆಯನ್ನು ಅರಸಿ ಹೊರಟ ಶಿಕ್ಷಣಾಕಾಂಕ್ಷಿಗೆ ಇವೆರಡೂ ಒಟ್ಟಿಗೆ ದೊರೆಯುವುದು ದುರ್ಲಭ. ದೊರೆಯುವಂತಿದ್ದರೂ ಅಂತಹ ಆಕಾಂಕ್ಷಿಗೆ ಅದನ್ನು ಎಟುಕಿಸಿಕೊಂಡು ಅದರ ಲಾಭ ಪಡೆಯುವುದು ಇನ್ನೂ ಕಷ್ಟದ ವಿಷಯ. ಶಿಕ್ಷಣ ಇಂದು ಅದೆಷ್ಟೋ ವಿದ್ಯಾರ್ಥಿಗಳ ಪಾಲಿಗೆ ಕೈಗೆಟುಕದ ಕುಸುಮವೇ ಆಗಿದೆ. ಅವರು ಬಯಸಿದ್ದು ಅವರ ಪಾಲಿಗೆ ದೊರೆಯುವಂತಿರುವುದಿಲ್ಲ. ಅದಕ್ಕೆ ನಾನಾ ಕಾರಣಗಳಿರುತ್ತವೆ. ಅದಕ್ಕೆ ಮುಖ್ಯ ಕಾರಣ ಆರ್ಥಿಕ ಕೊರತೆ ಹಾಗೂ ಸಾಮಾಜಿಕ ಹಿನ್ನೆಲೆ.

ಇಂದು ನಾವು ಕಲಿಯುತ್ತಿರುವ ವಿದ್ಯೆ ಉದ್ಯೋಗವೊಂದಕ್ಕೆ ಕಾರಣವಾಗಬಹುದೆಂಬುದು ನಿಜವಾದರೂ, ಅದು ಇಂತಹುದೇ ಹುದ್ದೆಯಾಗಬೇಕೆಂಬುದೇನೂ ಇಲ್ಲ. ಬದುಕಿಗೂ, ವಿದ್ಯೆಗೂ ಸಂಬಂಧ ಕಾಣದಿರುವಂತೆ, ವಿದ್ಯೆಗೂ–ವ್ಯಕ್ತಿಗೂ ಸಂಬಂಧವಿಲ್ಲದಂತಾಗಿದೆ. ತಾಂತ್ರಿಕ ಶಿಕ್ಷಣದಲ್ಲಿ ಶಿಕ್ಷಣ ಪಡೆದವರು ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ಕಾರಕೂನನಾಗಿಯೋ ಇಲ್ಲ ಪೋಲೀಸ್

ಇಲಾಖೆಯಲ್ಲಿ ಸಬ್‌ಇನ್ಸ್‌ಪೆಕ್ಟರ್ ಆಗಿಯೋ ಕಾರ್ಯನಿರ್ವಹಿಸುತ್ತಿರುವುದನ್ನು ಕಾಣುತ್ತೇವೆ. ಶಿಕ್ಷಣ ಪಡೆದು ತನ್ನೆಲ್ಲ ಆಸೆ ಆಕಾಂಕ್ಷೆಗಳನ್ನೂ ಬದಿಗೊತ್ತಿ ಮತ್ತಾವುದೋ ಸಂಬಂಧ ಪಡದ ಇಲಾಖೆಯಲ್ಲಿ ಹುದ್ದೆಮಾಡುವುದನ್ನು ಗಮನಿಸಿದಾಗ ನಮ್ಮ ಶಿಕ್ಷಣ ಪದ್ಧತಿಯ ಬಗೆಗೆ ಅನುಕಂಪ ಮೂಡುತ್ತದೆ.

ಪದವಿಪೂರ್ವ ಶಿಕ್ಷಣ ಇಂದಿನ ನಮ್ಮ ಶಿಕ್ಷಣ ಕ್ರಮದಲ್ಲಿ ವಿದ್ಯಾರ್ಥಿಗಳ ಭವಿಷ್ಯವನ್ನು ಬರೆಯುವ ಒಂದು ಮಹತ್ತರವಾದ ತಿರುವಿನ ಘಟ್ಟ ಎಂದು ಭಾವಿಸಲಾಗಿದೆ. ತಾಂತ್ರಿಕ ಶಿಕ್ಷಣ, ವೈದ್ಯ ಶಿಕ್ಷಣದ ಪ್ರವೇಶಕ್ಕೆ ಅದೇ ಹೆಬ್ಬಾಗಿಲು. ಹಾಗಾಗಿ ಇದಕ್ಕೆ ಎಲ್ಲಿಲ್ಲದ ಮಹತ್ವ ಹಾಗೂ ಮಾನ್ಯತೆಯನ್ನು ಕೊಡಲಾಗಿದೆ. ನಗರಗಳಲ್ಲಿ ಇದಕ್ಕೆಂದೇ ಕೆಲವು ಪ್ರತಿಷ್ಠಿತ ಹೆಸರಿನ ಕಾಲೇಜುಗಳು ಸಿದ್ಧವಾಗಿ ನಿಂತಿವೆ. ಇಲ್ಲಿ ಪ್ರವೇಶ ಪಡೆಯುವುದೇ ಒಂದು ಸಾಹಸದ ಕಾರ್ಯ. ಅತಿ ಹೆಚ್ಚಿನ ಅಂಕಗಳಿಸುವುದರ ಜೊತೆಗೆ ಹಣ, ಶಿಫಾರಸ್ಸು ಎಲ್ಲವೂ ಬೇಕಾಗುತ್ತದೆ. ಉಳಿದವರಿಗೆ ಅದರ ಬಾಗಿಲು ಮುಚ್ಚಿದಂತೆಯೇ.

ಹೀಗಾಗಿ ಶಿಕ್ಷಣದಲ್ಲಿ ಅಸಮಾನತೆ ಇರುವಂತೆಯೇ ಶಿಕ್ಷಕನಲ್ಲಿಯೂ ಅಸಮಾನತೆ ಇರುವುದು ವಿಪರ್ಯಾಸ. ಇದು ಗ್ರಾಮೀಣ ವಿದ್ಯಾರ್ಥಿಗಳು ಅನುಭವಿಸಬೇಕಾದ ಪಾಡು. ಸಮಾನ ಅವಕಾಶವನ್ನು ಕಲ್ಪಿಸದೆ ಸಮಾನ ಸ್ಪರ್ಧೆಯನ್ನು ಅಪೇಕ್ಷಿಸುವುದು, ನಿರೀಕ್ಷಿಸುವುದು ಯಾವ ನ್ಯಾಯ? ಪ್ರತಿಭೆ ಯಾರಲ್ಲಾದರೂ ಇರಬಹುದು. ಆದರೆ ಅದನ್ನು ಹೊರತೆಗೆಯುವ ಸಾಧನ ಒಂದೇ ಆಗಿದ್ದಾಗ ಮಾತ್ರ ಅದಕ್ಕೆ ನ್ಯಾಯ ಒದಗಿಸಿದಂತಾಗುತ್ತದೆ.

ಇವೆಲ್ಲವೂ ಒಂದು ಕಡೆಯಾದರೆ, ಮತ್ತೊಂದು ಕಡೆ ನಮ್ಮ ಶಿಕ್ಷಣ ಪದ್ಧತಿಯಲ್ಲಿ ಶಿಕ್ಷಣದ ಗುರಿಯನ್ನೇ ಮರೆತಂತಿದೆ. ಕೇವಲ ಅಕ್ಷರ ಜ್ಞಾನ ಅಥವಾ ವಿಷಯ ಜ್ಞಾನ ಅಷ್ಟೇ ವಿದ್ಯೆ ಎಂದು ಭಾವಿಸಿರುವಂತಿದೆ. 'ಎಲ್ಲ ಶಿಕ್ಷಣದ ಗುರಿ ಮಾನವನ ನಿರ್ಮಾಣ' ಎಂಬುದನ್ನು ಶಿಕ್ಷಣತಜ್ಞರು ಕಡೆಗಣಿಸಿದಂತೆ ತೋರುತ್ತದೆ. ''ನಾವು ಯಾವತ್ತೂ ಹೊರಗಿನ ಮೆರುಗನ್ನು ಕೊಡಲು ಪ್ರಯತ್ನಿಸುತ್ತಿರುತ್ತೇವೆ. ಒಳಗನ್ನು ಮುಟ್ಟದೆ, ಬರೇ ಹೊರಗಿನ ಮೆರಗು ಏನು ಸಾರ್ಥಕ? ಎಲ್ಲ ತರಬೇತಿಯ ಗುರಿ ಮತ್ತು ಉದ್ದೇಶ ಯಾವಾಗಲೂ ಮಾನವನ ಬೆಳವಣಿಗೆಗೆ ಪೂರಕವಾಗಬೇಕು.'' ಇದು ಸ್ವಾಮಿ ವಿವೇಕಾನಂದರ ಆಶಯ ಮತ್ತು ಗುರಿ.

ಶಿಕ್ಷಣ ಪದ್ಧತಿ ಮೊದಲು ಸಾಕಷ್ಟು ಸುಧಾರಿಸಬೇಕಾಗಿದೆ. ಅದು ವಿಷಯ ಜ್ಞಾನವನ್ನು ತುಂಬುವುದರ ಜೊತೆಗೆ ಅವನಲ್ಲಿ ಆಧ್ಯಾತ್ಮಿಕ ವಿಷಯಗಳನ್ನೂ ತುಂಬುವುದರ ಮೂಲಕ ಮಾನವತ್ವವನ್ನು ಬೆಳೆಸಬೇಕಾಗಿದೆ. ಮನುಷ್ಯತ್ವವನ್ನು ಕಳೆದುಕೊಂಡ ವಿದ್ಯೆ ಯಾವ ಪ್ರಯೋಜನಕ್ಕೂ ಬರಲಾರದು. ಅದೊಂದು ಯಂತ್ರದಂತಾಗಬಹುದು ಅಷ್ಟೆ. ಏಕೆಂದರೆ ವಿದ್ಯೆ ವಿನಯಕ್ಕೆ ದಾರಿ ಮಾಡಿಕೊಡುವಂತಾಗಬೇಕು.

ಶಿಕ್ಷಣ–ಶಿಕ್ಷಕ–ಶಿಕ್ಷಾರ್ಥಿ ಈ ಮೂರೂ ಮುಪ್ಪುರಿಗೊಂಡಾಗ ಮಾತ್ರ ಉದ್ದೇಶಿತ ಫಲಿತಾಂಶ ದೊರೆಯಲು ಸಾಧ್ಯ. ಶಿಕ್ಷಣ ಪದ್ಧತಿ ಮೊದಲು ಸರಿಯಾದ ರೀತಿಯಲ್ಲಿ ರೂಪುಗೊಳ್ಳಬೇಕು. ಅದರಲ್ಲಿ ಶಿಕ್ಷಾರ್ಥಿಯ ಒಳಹೊರಗನ್ನು ಸಕ್ರಿಯಗೊಳಿಸುವ ಪಠ್ಯ ತುಂಬಿರಬೇಕು. ನಂತರ ಅದನ್ನು ಶಿಕ್ಷಾರ್ಥಿಯಲ್ಲಿ ಸಮರ್ಥವಾಗಿ ಫಲಪ್ರದವಾಗಿಸುವ ಶಿಕ್ಷಕನ ತರಬೇತಿ ಕಾರ್ಯವೂ ಆಗಬೇಕು. ಒಬ್ಬ ಶಿಕ್ಷಕನಿಗೆ ತಾನು ಶಿಕ್ಷಾರ್ಥಿಗೆ ತಿಳಿಸಬೇಕಾದ ವಿಷಯದ ಅರಿವಿದ್ದರಷ್ಟೇ ಸಾಕಾಗದು, ಅದನ್ನು ಸಮರ್ಪಕವಾಗಿ, ಸಾರ್ಥಕ ರೀತಿಯಲ್ಲಿ ತಲುಪಿಸುವ ಪ್ರಕ್ರಿಯೆಯ ಅರಿವು ಮತ್ತು ಕೌಶಲ ಎರಡೂ ಮುಖ್ಯವಾಗುತ್ತದೆ. ಸಂವಹನ ಕ್ರಿಯೆಯಲ್ಲಿ ದೋಷ ವಿದ್ದರೆ ಅದು ತಕ್ಕ ಫಲವನ್ನು ನೀಡಲಾರದು. ''ನಿಜವಾದ ಶಿಕ್ಷಕನೆಂದರೆ ಆತ ಶಿಕ್ಷಾರ್ಥಿಯ ಮಟ್ಟಕ್ಕೆ ಇಳಿಯಬೇಕು. ವಿಧಿ ವಿಧಾನಗಳ ಮೂಲಕ ತನ್ನ ಆತ್ಮವನ್ನೇ ಶಿಕ್ಷಾರ್ಥಿಯ ಆತ್ಮದಲ್ಲಿ ಏಕೀಕರಿಸಬೇಕು.... ಅಂತಹ ಸಮರ್ಥ ವ್ಯಕ್ತಿಯೇ ನಿಜವಾದ ಶಿಕ್ಷಕನಾಗಿ ಶಿಕ್ಷಾರ್ಥಿಗೆ ಯೋಗ್ಯ ಶಿಕ್ಷಣ ಕೊಡಬಲ್ಲನಲ್ಲದೇ ಬೇರಾರೂ ಅಲ್ಲ. ಅಂತಹ ಪ್ರಭಾವಶಾಲಿ ವಾತಾವರಣದಲ್ಲಿ ಮಾತ್ರವೇ ಅಜ್ಞಾನದ ಮುಸುಕನ್ನು ಅನಾವರಣಗೊಳಿಸುವ ಪ್ರಕ್ರಿಯೆ ಸುಸೂತ್ರವಾಗಿ ಸಾಗೀತು'' ಎಂಬ ವಿವೇಕಾನಂದರ ಮಾತು ಶಿಕ್ಷಕನ ಜವಾಬ್ದಾರಿಯ ಕಡೆ ಬೆರಳು ಮಾಡುತ್ತದೆ.

ಹಾಗೆಂದು ಶಿಕ್ಷಾರ್ಥಿಯ ಜವಾಬ್ದಾರಿಯನ್ನೂ ಕಡೆಗಣಿಸುವಂತಿಲ್ಲ. ಅವನಲ್ಲಿಯೂ ಕಲಿಯುವ ಆಸೆ, ಆಕಾಂಕ್ಷೆ, ಆತ್ಮ ವಿಶ್ವಾಸ, ಶ್ರದ್ಧೆ, ಕುತೂಹಲ ಎಲ್ಲವೂ ಇರಬೇಕಾಗುತ್ತದೆ. 'ಆಚಾರ್ಯ ದೇವೋ ಭವ' ಎಂಬ ಗುರುಭಕ್ತಿಯೂ ಅದರಲ್ಲಿ ಬೆರೆತಿದ್ದಾಗ ಶಿಕ್ಷಕ ಹಾಗೂ ಶಿಕ್ಷಾರ್ಥಿಯ ಸಂಬಂಧ ಪರಸ್ಪರ ಗೌರವ ಭಾವನೆಯಿಂದ ಕೂಡಿದ್ದು ಕಲಿಕೆ ಸುಲಭವಾಗುತ್ತದೆ.

ಶಿಕ್ಷಣ ಮತ್ತು ಶಿಕ್ಷಕ ಕ್ರಿಯೆ ಏಕಮುಖವಾದುದಲ್ಲ — ದ್ವಿಮುಖಿಯಾದದ್ದು. ಪರಸ್ಪರ ಸಂವಹನ ಕ್ರಿಯೆಯಿಂದ ಮಾತ್ರ ಅದು ಹೆಚ್ಚು ಪರಿಣಾಮಕಾರಿಯಾಗಲು ಸಾಧ್ಯ. ಆ ಸಂವಹನ ಕ್ರಿಯೆ ಎಷ್ಟು ಆತ್ಮೀಯವಾದದ್ದಾಗಿರುತ್ತದೋ, ಅದು ಅಷ್ಟು ಉತ್ತಮ ಪರಿಣಾಮವನ್ನು, ಪ್ರಭಾವವನ್ನು ಉಂಟುಮಾಡಬಲ್ಲದು. ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುವ ಅಥವಾ ಆ ರಂಗದಲ್ಲಿ ನಿಂತ ಪ್ರತಿಯೊಬ್ಬರೂ ಸ್ವಾಮಿ ವಿವೇಕಾನಂದರ ಶಿಕ್ಷಣಕ್ಕೆ ಸಂಬಂಧಿಸಿದ ಈ ಮಾತನ್ನು ನೆನಪಿಡುವುದು ಅಗತ್ಯ :

**''ಯಾವುದೇ ನೇತ್ಯಾತ್ಮಕ ಶಿಕ್ಷಣ ಅಥವಾ ಋಣಾತ್ಮಕ ವಿಚಾರಗಳ ಮೇಲೆ ನೆಲೆನಿಂತ ಶಿಕ್ಷಣ, ಮರಣಕ್ಕಿಂತಲೂ ದುರ್ಭರ.. ನಮಗೆ ಬೇಕಾದುದು ಜೀವನವನ್ನು ಹಸನಾಗಿ ಮಾಡುವ, ಮಾನವನನ್ನು ಸೃಜಿಸುವ ಮತ್ತು ಚಾರಿತ್ರ್ಯವರ್ಧಕ ವಿಚಾರಗಳ ಸಾದೃಶ್ಯೀಕರಣ''**

ಆದ್ದರಿಂದ ಶಿಕ್ಷಣ ಪದ್ಧತಿ, ಶಿಕ್ಷಕ ಹಾಗೂ ಶಿಕ್ಷಣಾರ್ಥಿ — ಈ ಮೂರೂ ಒಂದಾಗಿ ನಡೆದಾಗ ಮಾತ್ರ ಸ್ವಾಮಿ ವಿವೇಕಾನಂದರ ಈ ಆಶಯ ಈಡೇರಿದಂತಾಗುತ್ತದೆ. ✷